ಶುಕ್ರವಾರ 26-09-2025 ಬೆಂಗಳೂರು ಬೆಲೆ: 5ರೂ, 4ಪಟಗಳು ಸಂಪುಟ 01-ಸಂಚಿಕೆ 62 Digital Varthe Kannada Daily Volume 01 - Issue 62 Friday 26-09-2025 Price: 5/- Rs 2 Pages Bengalore

DIGITAL VARTHE
www.digitalvarthe.com
digitalvarthe@gmail.com

# ಡಿಜಿಟಲ್ ವಾರ್ತೆ
ಕನ್ನಡಿಗರ ಶಕ್ತಿ

ಅಭಿಷೇಕ್ ಚಿಕ್ಕಮಾರನಹಳ್ಳಿ
ಸಂಪಾದಕರು
ಪುರುಷೋತ್ತಮ್ ಬಿ.ಹೆಚ್
ವ್ಯವಸ್ಥಾಪಕರು
RNI:KNKAN/25/A1348
ಕನ್ನಡ ದಿನಪತ್ರಿಕೆ

## ಸಮೀಕ್ಷಾ ಕರ್ತವ್ಯದಿಂದ ವಿಮುಕ್ತರಾಗುವ ನೌಕರರ ಮೇಲೆ ಶಿಸ್ತು ಕ್ರಮ :ಸರ್ಕಾರ ಎಚ್ಚರಿಕೆ

ಬೆಂಗಳೂರು: ಸೆ.25-ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಕೈಗೊಳ್ಳಲಾಗಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ಕಾರ್ಯದಲ್ಲಿ ನಿಯೋಜಿಸಲ್ಪಡುವ ಅಧಿಕಾರಿ/ನೌಕರರು ಸಮೀಕ್ಷಾ ಕಾರ್ಯಕ್ಕೆ ಹಾಜರಾಗದೇ ಮತ್ತು ಕರ್ತವ್ಯಗಳನ್ನು ನಿರ್ವಹಿಸದೇ ಇರುವಂತಹವರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ ಹಾಗೂ ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವ ಎಚ್.ಕೆ ಪಾಟೀಲ ತಿಳಿಸಿದರು.



ಸಚಿವ ಸಂಪುಟದ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ಸಮೀಕ್ಷಾ ಕಾರ್ಯದಲ್ಲಿ ನಿಯೋಜಿಸಲ್ಪಡುವ ಅಧಿಕಾರಿ/ನೌಕರರು ಸಮೀಕ್ಷಾ ಕಾರ್ಯಕ್ಕೆ ಗೈರುಹಾಜರಾದರೆ ಅಂತಹವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಬೆಂಗಳೂರು ವ್ಯಾಪ್ತಿಯಲ್ಲಿ ಗ್ರೇಟ-ರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಿಗೆ ಅಧಿಕಾರ ಪ್ರಾಯೋಜಿಸಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ನಡೆಯುತ್ತಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ಕುರಿತು ಕೆಲವು ನಿರ್ದೇಶನಗಳನ್ನು ನೀಡಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಬೆಳಿಗ್ಗೆ 11.30 ಗಂಟೆಗೆ ರಾಜ್ಯದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾ-ರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲಿದ್ದಾರೆಂದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷಾ ಕಾರ್ಯಕ್ಕಾಗಿ ಗಣತಿದಾರರಾಗಿ ನಿಯೋಜಿಸಲ್ಪಡುವ ಸರ್ಕಾರ, ನಿಗಮ/ಮಂಡಳಿಗಳ ಅಧಿಕಾರಿ/ ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 2021ರಡಿ ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರನ್ವಯ ಶಿಸ್ತುಕ್ರಮ ಮತ್ತು ದಂಡನೆ ವಿಧಿಸುವ ಅಧಿಕಾರವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರಿಗೆ ಪ್ರತ್ಯಾಯೋಜಿಸುವಂತೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಎಂದು ಅವರು ಹೇಳಿದರು.

## ಪ್ಯಾಲೆಸ್ತಾನ್ ವಿಷಯದಲ್ಲಿ ಭಾರತ ನಾಯಕತ್ವ ಪ್ರದರ್ಶಿಸಬೇಕು ;ಸೋನಿಯಾ ಗಾಂಧಿ



ನವದೆಹಲಿ: ಪ್ಯಾಲೆಸ್ತಾನ್ ವಿಷಯದಲ್ಲಿ ಭಾರತ ನಾಯಕತ್ವವನ್ನು ಪ್ರದರ್ಶಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮೋದಿ ಸರ್ಕಾರದ ನಿಲುವನ್ನು ಟೀಕಿಸಿದ್ದಾರೆ.

ಸರ್ಕಾರದ ಕ್ರಮಗಳು ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಅವರ ಇಸ್ರೇಲ್ ಪ್ರತಿರೂಪ ಬೆಂಜಮಿನ್ ನೆತನ್ಯಾಹು ನಡುವಿನ ವೈಯಕ್ತಿಕ ಸ್ನೇಹದಿಂದ ಮತ್ತು ಭಾರತದ ಸಾಂವಿಧಾನಿಕ ಮೌಲ್ಯಗಳು ಅಥವಾ ಅದರ ಕಾರ್ಯತಂತ್ರದ ಹಿತಾಸಕ್ತಿಗಳಿಂದ ನಡೆಸಲ್ಪಡುತ್ತಿರುವಂತೆ ತೋರುತ್ತದೆ ಎಂದು ಅವರು ಹೇಳಿದರು.

ಈ ರೀತಿಯ ವೈಯಕ್ತಿಕಗೊಳಿಸಿದ ರಾಜತಾಂತ್ರಿಕತೆಯು ಎಂದಿಗೂ ಸಮರ್ಥನೀಯವಲ್ಲ ಮತ್ತು ಭಾರತದ ವಿದೇಶಾಂಗ ನೀತಿಯ ಮಾರ್ಗದರ್ಶಿ ದಿಕ್ಸೂಚಿಯಾಗಲು ಸಾಧ್ಯವಿಲ್ಲ. ಪ್ರಪಂಚದ ಇತರ ಭಾಗಗಳಲ್ಲಿ, ವಿಶೇಷವಾಗಿ ಯುನೈಟೆಡ್ ಸ್ಟೇಟ್?ಸನಲ್ಲಿ? ಇದನ್ನು ಮಾಡಲು ಮಾಡಿದ ಪ್ರಯತ್ನಗಳು ಇತ್ತೀಚಿನ ತಿಂಗಳುಗಳಲ್ಲಿ ಅತ್ಯಂತ ನೋವಿನ ಮತ್ತು ಅವಮಾನಕರ ರೀತಿಯಲ್ಲಿ ವಿಫಲವಾಗಿವೆ ಎಂದು ಅವರು ದಿ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ.

ಇತ್ತೀಚೆಗೆ ರಾಷ್ಟ್ರೀಯ ದಿನಪತ್ರಿಕೆಯಲ್ಲಿ ಪ್ರಕಟವಾದ ಇಸ್ರೇಲ್-ಪ್ಯಾಲೆಸ್ತಾನ್ ಸಂಘರ್ಷದ ಕುರಿತು ಗಾಂಧಿಯವರ ಮೂರನೇ ಲೇಖನ ಇದಾಗಿದ್ದು, ಈ ವಿಷಯದ ಬಗ್ಗೆ ಮೋದಿ ಸರ್ಕಾರದ ನಿಲುವನ್ನು ಅವರು ತೀವ್ರವಾಗಿ ಟೀಕಿಸಿದ್ದಾರೆ.

ವಿಶ್ವ ವೇದಿಕೆಯಲ್ಲಿ ಭಾರತದ ಸ್ಥಾನವನ್ನು ಒಬ್ಬ ವ್ಯಕ್ತಿಯ ವೈಯಕ್ತಿಕ ವೈಭವವನ್ನು ಹುಡುಕುವ ಮಾರ್ಗಗಳಲ್ಲಿ ಸುತ್ತುವರಿಯಲಾಗುವುದಿಲ್ಲ, ಅಥವಾ ಅದು ತನ್ನ ಐತಿಹಾಸಿಕ ಪ್ರಶಸ್ತಿಗಳ ಮೇಲೆ ಅವಲಂಬಿತವಾಗಿಲ್ಲ. ಇದು ನಿರಂತರ ಧೈರ್ಯ ಮತ್ತು ಐತಿಹಾಸಿಕ ನಿರಂತರತೆಯ ಪ್ರಜ್ಞೆಯನ್ನು ಬಯಸುತ್ತದೆ ಎಂದು ಅವರು ಭಾರತದ ಮೌನ ಧ್ವನಿ, ಪ್ಯಾಲೆಸ್ತಾನ್‌ನೊಂದಿಗಿನ ಅದರ ಬೇರ್ಪಡುವಿಕೆ ಎಂಬ ಶೀರ್ಷಿಕೆಯ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ದೀರ್ಘಕಾಲದ ಪ್ಯಾಲೆಸ್ತಾನಿ ಜನರ ಕಾನೂನುಬದ್ಧ ಆಕಾಂಕ್ಷೆಗಳನ್ನು ಈಡೇರಿಸುವ ಮೊದಲ ಹೆಜ್ಜೆ.ವಿಶ್ವಸಂಸ್ಥೆಯ ಸದಸ್ಯರಾಗಿರುವ 193 ದೇಶಗಳಲ್ಲಿ 150 ಕ್ಕೂ ಹೆಚ್ಚು ದೇಶಗಳು ಈಗ ಹಾಗೆ ಮಾಡಿವೆ ಎಂದು ಅವರು ಹೇಳಿದರು.ಪ್ಯಾಲೆಸ್ಟೈನ್ ವಿಮೋಚನಾ ಸಂಸ್ಥೆಗೆ ವರ್ಷಗಳ ಬೆಂಬಲದ ನಂತರ, ನವೆಂಬರ್ 18, 1988 ರಂದು ಪ್ಯಾಲೆಸ್ಥಾನ್‌ಗೆ ರಾಜ್ಯತ್ವವನ್ನು ಔಪಚಾರಿಕವಾಗಿ ಗುರುತಿಸುವ ಮೂಲಕ ಭಾರತವು ಈ ವಿಷಯದಲ್ಲಿ ನಾಯಕನಾಗಿತ್ತು ಎಂದು ಗಾಂಧಿಯವರು ಒತ್ತಿ ಹೇಳಿದರು.

1971 ರಲ್ಲಿ, ಭಾರತವು ಪೂರ್ವ ಪಾಕಿಸ್ತಾನದಲ್ಲಿ ನರಮೇಧವನ್ನು ತಡೆಯಲು ದೃಢವಾಗಿ ಮಧ್ಯಪ್ರವೇಶಿಸಿತು, ಆದ-ುನಿಕ ಬಾಂಗ್ಲಾದೇಶದ ಜನನದ ಮಧ್ಯದಲ್ಲಿ ಎಂದು ಅವರು ಗಮನಸೆಳೆದರು. ಇಸ್ರೇಲ್-ಪ್ಯಾಲೆಸ್ತಾನ್‌ನ ನಿರ್ಣಾಯಕ ಮತ್ತು ಸೂಕ್ಷ್ಮ ವಿಷಯದ ಬಗ್ಗೆಯೂ ಸಹ, ಭಾರತವು ಬಹಳ ಹಿಂದಿನಿಂದಲೂ ಸೂಕ್ಷ್ಮ ಆದರೆ ತತ್ವಬದ್ಧ ಸ್ಥಾನವನ್ನು ಕಾಯ್ದುಕೊಂಡಿದೆ, ಶಾಂತಿ ಮತ್ತು ಮಾನವ ಹಕ್ಕುಗಳ ರಕ್ಷಣೆಗೆ

## ಸೆ.26 ರಿಂದ ನಡೆಯಲಿರುವ ಕಾವೇರಿ ಆರತಿ ಸಿದ್ಧತೆ ಪರಿಶೀಲಿಸಿದ ಡಿಕೆಶಿ

ಮೈಸೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆ.ಆರ್.ಎಸ್ ಬೃಂದಾವನದಲ್ಲಿ ಸೆ.26 ರಿಂದ ನಡೆಯಲಿರುವ ಸಾಂಕೇತಿಕ ಕಾವೇರಿ ಆರತಿ ಕುರಿತಂತೆ ಸ್ಥಳ ಪರಿಶೀಲನೆ ನಡೆಸಿದರು.

ವೇದಿಕೆ, ಕಾವೇರಿ ಆರತಿ ನಡೆಯುವ ಸ್ಥಳ ಮತ್ತು ವೀಕ್ಷಕರಿಗೆ ಆಸನದ ವ್ಯವಸ್ಥೆ ಕುರಿತಂತೆ ಪರಿಶೀಲನೆ ನಡೆಸಿದ ಉಪಮುಖ್ಯ ಮಂತ್ರಿಗಳು ಅಧಿಕಾರಿಗಳಿಗೆ ಕಾರ್ಯಕ್ರಮವು ಯಾವುದೇ ಲೋಪವಿಲ್ಲದೆ ನಡೆಸಲು ಸೂಚನೆ ನೀಡಿದರು.

ಕಾವೇರಿ ಆರತಿ ಸಮಿತಿ ಅಧ್ಯಕ್ಷರೂ ಆದ ಬೆಂಗಳೂರು ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಆಯುಕ್ತರಾದ ರಾಮ್ ಪ್ರಸಾತ್ ಮನೋಹರ್ ಅವರು ಕಾವೇರಿ ಆರತಿಯ ರೂಪುರೇಷೆಗಳನ್ನು ಕುರಿತು ಡಿಸಿಎಂ ಅವರಿಗೆ ವಿವರಿಸಿದರು.

ಉಪಮುಖ್ಯಮಂತ್ರಿಗಳು ಕಾವೇರಿ ಆರತಿ ಪೂರ್ವ ತಾಲೀಮು ವೀಕ್ಷಣೆ ಮಾಡಿದರು. ಪರಿಶೀಲನೆ ವೇಳೆ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷರಾದ ರಮೇಶ ಬಂಡಿಸಿದ್ದೇಗೌಡ, ಮಂಡ್ಯ ಶಾಸಕ ಪಿ. ರವಿಕುಮಾರ್, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ. ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ. ಆರ್ ನಂದಿನಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಜತೆಗಿದ್ದರು.



## ಮೈಸೂರಿನಲ್ಲಿ ಬೈರಪ್ಪನವರ ಸ್ಮಾರಕ ನಿರ್ಮಾಣ :ಸಿಎಂ ಘೋಷಣೆ

ಬೆಂಗಳೂರು: ಸಾಹಿತಿ ಎಸ್.ಎಲ್. ಭೈರಪ್ಪ ಅವರ ಸ್ಮಾರಕವನ್ನು ಮೈಸೂರಿನಲ್ಲಿ ನಿರ್ಮಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಭೈರಪ್ಪ ಅವರ ಅಂತಿಮ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೇರು ಸಾಹಿತಿಯ ನಿಧನದಿಂದ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಶೋಕಿಸಿದರು.





ಭೈರಪ್ಪ 25ಕ್ಕೂ ಹೆಚ್ಚು ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಸಾಹಿತ್ಯ 40 ಭಾಷೆಗಳಿಗೆ ಭಾಷಾಂತರಗೊಂಡಿವೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಬೇರೆ ಸಾಹಿತಿಗಳ ಪುಸ್ತಕಗಳು ತುರ್ಜುಮೆಗೊಂಡಿರುವ ಉದಾಹರಣೆಗಳಿಲ್ಲ ಎಂದರು.

ಪ್ರೌಢಶಾಲೆಯಿಂದ ಸ್ನಾತಕೋತ್ತರವರೆಗೂ ಮೈಸೂರಿನಲ್ಲೇ ವಿದ್ಯಾಭ್ಯಾಸ ಮಾಡಿದ್ದರು. ಕಷ್ಟಪಟ್ಟು ಮೇಲೆ ಬಂದವರು. ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಚಿಕ್ಕ ವಯಸ್ಸಿನಲ್ಲೇ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದರು. ಬೋಧನೆ ಹಾಗೂ ಬರೆವಣಿಗೆ ಎರಡನ್ನೂ ಏಕಕಾಲಕ್ಕೆ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದರು ಎಂದು ಹೇಳಿದರು. ಪದಶ್ರೀ, ಸರಸ್ವತಿ ಸನಾನ್, ನಾಡೋಜ, ರಾಜ್ಯೋತ್ಸವ, ಪಂಪಾ ಸೇರಿದಂತೆ ಅನೇಕ ಪ್ರಶಸ್ತಿಗಳು ಆವರಿಗೆ ಲಭಿಸಿದ್ದವು.

ಎಲ್ಲದಕ್ಕೂ ಅವರು ಅರ್ಹರಿದ್ದರು. ಜ್ಞಾನಪೀಠ ಪ್ರಶಸ್ತಿ ಸಿಗಲಿಲ್ಲ ಎಂಬ ನೋವು ಉಳಿದಿತ್ತು, ನನ್ನ ಪ್ರಕಾರ ಅವರಿಗೆ ಜ್ಞಾನಪೀಠ ಸಿಗಬೇಕಿತ್ತು ಎಂದರು. ಭೈರಪ್ಪ ಹಾಗೂ ನನ್ನ ವಿಚಾರಗಳ ನಡುವೆ ವ್ಯತ್ಯಾಸವಿದ್ದರೂ ಸ್ನೇಹಕ್ಕೆ ಕುಂದಾಗಿರಲಿಲ್ಲ. ಸಾಹಿತ್ಯ ಹಾಗೂ ದೃಷ್ಟಿಕೋನಗಳು ಬೇರೆ ಬೇರೆಯಾಗಿರಬಹುದು, ಒಂದೇ ಆಗಿರಬೇಕೆಂಬ ನಿಯಮಗಳೂ ಇಲ್ಲ. ಅಭಿಪ್ರಾಯ ಬೇರೆ ಇದೆ ಎಂಬ ಕಾರಣಕ್ಕೆ ಅಭಿಮಾನಿಯಾಗಿರಬಾರದು ಎಂದೇನಿಲ್ಲ ಎಂದರು.

ಸಚಿವರಾದ ಮಧುಬಂಗಾರಪ್ಪ, ಶಿವರಾಜ ತಂಗಡಗಿ ಶಾಸಕರಾದ ರಾಘವೇಂದ್ರ ಹಿಟ್ನಾಳ್, ಅಲ್ಲಮಪ್ರಭು ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.ಇದೇ ಸಂದರ್ಭದಲ್ಲಿ ಭೈರಪ್ಪ ಅವರ ಕುಟುಂಬದ ಸದಸ್ಯರನ್ನು ಸಿದ್ದರಾಮಯ್ಯ ಭೇಟಿ ಮಾಡಿ, ಸಾಂತ್ವಾನ ಹೇಳಿದರು.

## ಅಗ್ನಿ-ಪ್ರೈಮ್ ಕ್ಷಿಪಣಿಯ ಪರೀಕ್ಷೆ ಯಶಸ್ವಿ :ಮಹತ್ವದ ಮೈಲಿಗಲ್ಲು ಸಾಧಿಸಿದ ಡಿಆರ್‌ಡಿಒ

ಬಾಲಸೋರ್: ಒಡಿಶಾದ ಬಾಲಸೋರ್ ನಲ್ಲಿರುವ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್‌ನಲ್ಲಿ ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ನಡೆಸಿದ ಅಗ್ನಿ-ಪ್ರೈಮ್ ಕ್ಷಿಪಣಿಯ ಯಶಸ್ವಿ ಪರೀಕ್ಷೆಯೊಂದಿಗೆ ಮತ್ತೊಂದು ಮಹತ್ವದ ಮೈಲಿಗಲ್ಲು ಸಾಧಿಸಿದಂತಾಗಿದೆ.

ಈ ಪರೀಕ್ಷೆಯನ್ನು ಡಿಆರ್‌ಡಿಒ, ಎಸ್‌ಎಫ್‌ಸಿ ಮತ್ತು ಭಾರತೀಯ ಸಶಸ್ತ್ರ ಪಡೆಗಳು ಜಂಟಿಯಾಗಿ ನಡೆಸಿವೆ. ಈ ಪರೀಕ್ಷೆಯು ಭಾರತದ ಆತನಿರ್ಭರ ಭಾರತ ಯೋಜನೆಯ ಭಾಗವಾಗಿದೆ. ಇದು ಅಗ್ನಿ ಸರಣಿಯ ಆರನೇ ಕ್ಷಿಪಣಿಯಾಗಿದ್ದು, ಇದನ್ನು ಈಗಾಗಲೇ ಭಾರತೀಯ ಸೇನೆಯಲ್ಲಿ ನಿಯೋಜಿಸಲಾಗಿದೆ.

ಈ ಹೊಸ ಪೀಳಿಗೆಯ ಕ್ಷಿಪಣಿಯನ್ನು ರೈಲು ಆಧಾರಿತ ಮೊಬೈಲ್ ಲಾಂಚರ್‌ನಿಂದ ಉಡಾಯಿಸಲಾಯಿತು. ಪರೀಕ್ಷೆಯು ಸಂಪೂರ್ಣ ಯಶಸ್ವಿಯಾಗಿದೆ. 2,000 ಕಿ.ಮೀ.ವರೆಗಿನ ವ್ಯಾಪ್ತಿಗಾಗಿ ವಿನ್ಯಾಸಗೊಳಿಸಲಾದ ಈ ಕ್ಷಿಪಣಿಯು ಚಲನಶೀಲತೆ ಮತ್ತು ತ್ವರಿತ ನಿಯೋಜನೆಯನ್ನು ಹೆಚ್ಚಿಸಲು ಸುಧಾ-ರಿತ ವೈಶಿಷ್ಟ್ಯಗಳನ್ನು ಒಳಗೊಂಡಿದೆ.

ಈ ಕುರಿತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉಡಾವಣೆಯ ಕುರಿತು ತಮ ಸಾಮಾಜಿಕ ಜಾಲತಾಣ ಎಕ್?ಸನಲ್ಲಿ ಪೋಸ್ಟ್ ಮಾಡಿದ್ದು, ಭಾರತವು ರೈಲು ಆಧಾರಿತ ಮೊಬೈಲ್ ಲಾಂಚರ್ ವ್ಯವಸ್ಥೆಯಿಂದ ಮಧ್ಯಂತರ ಶ್ರೇಣಿಯ ಅಗ್ನಿ-ಪ್ರೈಮ್ ಕ್ಷಿಪಣಿಯ ಯಶಸ್ವಿ ಉಡಾವಣೆಯನ್ನು ನಡೆಸಿದೆ. ಈ ಮುಂದಿನ ಪೀಳಿಗೆಯ ಕ್ಷಿಪಣಿಯನ್ನು 2000 ಕಿ.ಮೀ. ವರೆಗಿನ ವ್ಯಾಪ್ತಿಯನ್ನು ಕ್ರಮಿಸಲು ವಿನ್ಯಾಸಗೊಳಿಸಲಾಗಿದೆ ಮತ್ತು ವಿವಿಧ ಸುಧಾರಿತ ವೈಶಿಷ್ಟ್ಯಗಳೊಂದಿಗೆ ಸಜ್ಜುಗೊಂಡಿದೆ.

ಈ ಸಾಧನೆಗಾಗಿ ಅವರು



ಡಿಆರ್‌ಡಿಒ ? ಇಂಡಿಯಾ ಸ್ಟ್ರಾಟೆಜಿಕ್ ಫೋರ್ಸಸ್ ಕಮಾಂಡ್ (ಎಸ್ ಎಫ್ ಸಿ) ಮತ್ತು ಸಶಸ್ತ್ರ ಪಡೆಗಳನ್ನು ಅಭಿನಂದಿಸಿದ್ದಾರೆ.

ಈ ಯಶಸ್ವಿ ಹಾರಾಟ ಪರೀಕ್ಷೆಯು ಭಾರತವನ್ನು ಮೂವ್ ರೈಲ್ ನೆಟ್‌ವರ್ಕ್‌ನಿಂದ ಕ್ಯಾನಿಸ್ಟರೈಸ್ಡ್ ಲಾಂಚ್ ಸಿಸ್ಟಮ್ ಅನ್ನು ಅಭಿವೃದ್ಧಿಪಡಿಸಿದ ಸಾಮಥ-್ಯ ಹೊಂದಿರುವ ಆಯ್ದ ರಾಷ್ಟ್ರಗಳ ಗುಂಪಿಗೆ ಸೇ-ರಿಸಿದೆ ಎಂದು ಬರೆಯಲಾಗಿದೆ. ಪರೀಕ್ಷೆಯು ಎಲ್ಲಾ ಉದ್ದೇಶಗಳನ್ನು ಪೂರೈಸಿದೆ. ಈ ಪ್ರಯೋಗವನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾದ ರೈಲು ಆಧಾರಿತ ಮೊಬೈಲ್ ಲಾಂಚರ್‌ನಿಂದ ನಡೆಸಲಾಗಿರುವುದರಿಂದ ಇದನ್ನು ವಿಶಿಷ್ಟ ಎಂದು ಕರೆಯಲಾಗುತ್ತದೆ.

ಇದು ಪ್ರಸ್ತುತ ಕೆಲವೇ ರಾಷ್ಟ್ರಗಳು ಹೊಂದಿರುವ ರಕ್ಷಣಾ ಸಾಮಥ್ರ್ಯವಾಗಿದೆ

ವಿಶೇಷವಾಗಿ ವಿನ್ಯಾಸಗೊಳಿಸಲಾದ ರೈಲು ಆದ-ಾರಿತ ಮೊಬೈಲ್ ಲಾಂಚರ್‌ನಿಂದ ನಡೆಸಲಾದ ಈ ರೀತಿಯ ಮೊದಲ ಉಡಾವಣೆಯು ಯಾವುದೇ ಪೂರ್ವ-ಷರತ್ತುಗಳಿಲ್ಲದೆ ರೈಲು ಜಾಲದಲ್ಲಿ ಚಲಿಸುವ ಸಾಮರ್ಥ್ಯವನ್ನು ಹೊಂದಿದೆ. ಇದು ಬಳಕೆದಾರರಿಗೆ ದೇಶಾದ್ಯಂತ ಚಲನಶೀಲತೆಯನ್ನು ಹೊಂದಲು ಮತ್ತು ಕಡಿಮೆ ಗೋಚರತೆಯೊಂದಿಗೆ ಕಡಿಮೆ ಪ್ರತಿಕ್ರಿಯೆ ಸಮಯದೊಳಗೆ ಉಡಾವಣೆ ಮಾಡಲು ಅನುವು ಮಾಡಿಕೊಡುತ್ತದೆ.

ಅಗ್ನಿ-ಪ್ರೈಮ್ ಎಂದರೇನು? :

ಅಗ್ನಿ-ಪ್ರೈಮ್ ಅಗ್ನಿ ಸರಣಿಯ ಅತ್ಯಂತ ಮುಂದುವರಿದ ಕ್ಷಿಪಣಿಯಾಗಿದೆ. ಇದು ಮಧ್ಯಂತರ ವ್ಯಾಪ್ತಿಯನ್ನು ಹೊಂದಿದ್ದು, 2,000 ಕಿಲೋಮೀಟರ್‌ಗಳವರೆಗಿನ ಗುರಿಗಳನ್ನು ಹೊಡೆಯುವ ಸಾಮರ್ಥ್ಯವನ್ನು ಹೊಂದಿದೆ. ಇದು ಹಲವಾರು ಸುಧಾರಿತ ವೈಶಿಷ್ಟ್ಯಗಳನ್ನು ಹೊಂದಿದೆ.

ನಿಖರವಾದ ಗುರಿ:

ಈ ಸುಧಾರಿತ ಸಂಚರಣೆ ವ್ಯವಸ್ಥೆಯು ಶತ್ರು ನೆಲೆಗಳ ಮೇಲೆ ನಿಖರವಾದ ಗುರಿಯನ್ನು ಇಟ್ಟು ದಾಳಿ ಮಾಡುತ್ತದೆ. ವೇಗದ ಪ್ರತಿಕ್ರಿಯೆ: ಕಡಿಮೆ ಗೋಚರವಾಗಿದ್ದರೂ ಸಹ, ಕಡಿಮೆ ಸಮಯದಲ್ಲಿ ಉಡಾವಣೆ ಮಾಡಬಹುದು. ಗಟ್ಟಿಮುಟ್ಟಾದ ವಿನ್ಯಾಸ: ಮಳೆ, ಧೂಳು ಅಥವಾ ಶಾಖದಿಂದ ರಕ್ಷಿಸುವ ಬಾಕ್?ಸನಲ್ಲಿ (ಮುಚ್ಚಿದ ಪೆಟ್ಟಿಗೆ) ಸಂಗ್ರಹಿಸಲಾಗಿದೆ. ಈ ಕ್ಷಿಪಣಿಯನ್ನು ಭಾರತದ ಸ್ಟ್ರಾಟೆಜಿಕ್ ಫೋರ್ಸಸ್

ಡಿಜಿಟಲ್ ವಾರ್ತೆ

# ಶ್ರೀ ಸಂಗಮೇಶ್ವರ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ 21 ನೇ ವಾರ್ಷಿಕ ಮಹಾಸಭೆ

ಮುದ್ದೇಬಿಹಾಳ: ಕೃಷಿ ಸಹಕಾರಿ ಸಂಘಗಳು ಆರ್ಥಿಕವಾಗಿ ಬೆಳೆಯಲು ಉತ್ತಮ ಠೇವುದಾರರಗಿಂತ ಉತ್ತಮ ಸಾಲವನ್ನು ಮರುಪಾವತಿ ಸಂಘವು ಬೆಳವಣಿಗೆ ಸಾಧ್ಯವಾಗುತ್ತದೆ ಎಂದಜ
ಹಿರೇಮುರಾಳ ಶ್ರೀ ಸಂಗಮೇಶ್ವರ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷ ಮಲ್ಲನಗೌಡ ಪಾಟೀಲ್ ಹೇಳಿದರು.
ತಾಲ್ಲೂಕಿನ ಹಿರೇಮುರಾಳ ಗ್ರಾಮದ ಶ್ರೀ ನೀಲಕಂಠೇಶ್ವರ ಸಭಾಭವನದಲ್ಲಿ ಶ್ರೀ ಸಂಗಮೇಶ್ವರ ವಿವಿಧೋದ್ದೇಶ ಪ್ರಾಥ-ಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ 21 ನೇ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿದರು ಪ್ರಸ್ತಕ ವರ್ಷ ಸಂಘ 16.05 ಲಕ್ಷ ಲಾಭಗಳಿಸಿದೆ ದೀಪಾವಳಿ ಒಳಗೆ ಸಂಘದ ನೂತನ ಕಟ್ಟಡ ಲೋಕಾರ್ಪಣೆ ಮಾಡಲಾಗುತ್ತದೆ ಎಂದು ವಿವರಿಸಿದರು.



ವಾರ್ಷಿಕ ವರದಿಯನ್ನು ವಾಚಿಸಿದ ಮುಖ್ಯ ಕಾರ್ಯನಿರ್ವಾಹಕ ಎ.ಬಿ ಬಾಗೇವಾಡಿ ಕಳೆದ 17 ವರ್ಷಗಳಿಂದ ಸಂಘ ಅಡಿಟ್ ವರ್ಗೀಕರಣದಲ್ಲಿ ಎ ಗ್ರೇಡ್ ಹೊಂದಿದೆ ಹಾಗೂ ನಮ್ಮ ಸಂಘದಲ್ಲಿ ಮೈಕ್ರೋ ಎಟಿಎಂ ವ್ಯವಸ್ಥೆ ಕಾಮನ್ ಸರ್ವಿಸ್ ಇ _ಸ್ಟಾಪಿಂಗ್ ಸೌಲಭ್ಯವಿದ್ದು ಸದಸ್ಯರು ಸದುಪಯೋಗ ಪಡಿಸಿಕೊಳ್ಳಬೇಕೆಂದರು.
ಈ ವೇಳೆ ರೈತ ಮುಖಂಡ ಜೆಡಿಎಸ್ ಪಕ್ಷದ ನಾಯಕ ಬಿ.ಬಿ ಪಾಟೀಲ್ ಮಾತನಾಡಿ ವಿಡಿಸಿಸಿ ಬ್ಯಾಂಕ್ ಬೇರುಗಳೆಂದರೆ ಸಹಕಾರಿ ಪತ್ತಿನ ಬ್ಯಾಂಕ್ ಗಳಾಗಿವೆ ಸಹಕಾರಿ ಸಂಘಗಳು ಸ್ವಂತ ಬಲದಿಂದ ಬೆಳೆಯುತ್ತಿವೆ ಎಂದ ಅವರು ನಮ್ಮ ಭಾಗದ ರೈತರು ನೀರಾವರಿ ಬಗ್ಗೆ ಎಚ್ಚರಗೊಳ್ಳಬೇಕು ಸಂಪೂರ್ಣ ನೀರಾವರಿ ನಮ್ಮ ಭಾಗದಲ್ಲಿ ಆದರೆ ರೈತರು ಸಂಘದಲ್ಲಿ ಸಾಲವಲ್ಲ ಡಿಪಾಜಿಟ್ ಇಡುತ್ತಾರೆ ಎಂದರು.

ಸಂಘದ ನಿಕಟಪೂರ್ವ ಅದ್ಯಕ್ಷ ಬಿ ಬಿ ಭೋವಿ ಮಾತನಾಡಿ ಸಕಾಲದಲ್ಲಿ ತೆಗೆದುಕೊಂಡ ಸಾಲ ಮರುಪಾವತಿಸಬೇಕು ಸಂಘದ ನೂತನ ಕಟ್ಟಡ ಕಾನೂನು ಸಲಹೆಯಿಂದ ಪೂರ್ಣಗಳ್ಳಲು ಸಾಧ್ಯವಿದೆ ಹೊಸ ಕಟ್ಟಡಕ್ಕೆ ಪರ್ನಿಚರ್ಸ್ ಮಾಡಿಸಲು ಕಟ್ಟಡ ನಿಧಿ ಬಳಕೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.
ಹತ್ತನೆ ಹಾಗೂ ದ್ವಿತಿಯ ಪಿಯುಸಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಮಾಡಲಾಯಿತು.
ಸಭೆಯಲ್ಲಿ ಪಣಯ್ಯ ಹಿರೇಮಠ,ಗಣ್ಯರಾದ ಪ್ರಸನ್ನ ಕುಮಾರ್ ಜಾಗಿರದಾರ,ಬಿ.ಜಿ ಮಠ, ಎನ್.ಎಸ್ ರಾಮೋಡಗಿ,ಆದೇಶ ನಾಗರತ್ತಿ, ಸಿ ಬಿ ನಾಗರಬೆಟ್ಟ ಅಕ್ಬರ್ ಮುಲ್ಲಾ, ಮಲ್ಲೇಶಪ್ಪ ಬಿರಾದಾರ, ಬಸವಂತರಾಯ ನಾಗರತ್ತಿ, ಆದಪ್ಪರಾಮೋಡಗಿ, ಗದ್ದೆಪ್ಪ ಜೈನಾಪುರ, ಬಸಣ್ಣ ಕೇಸಾಪೂರ, ಎಂ.ಬಿ ಪಾಟೀಲ್, ಸಂಘದ ಉಪಾಧ್ಯಕ್ಷ ಸಿ.ಎಸ್ ರಾಮೋಡಗಿ, ನಿರ್ದೇಶಕರಾದ ಕೆ.ಎಸ್ ಹಿರೇಗೌಡರ, ಬಾಬುಸಾಬ ಮುಲ್ಲಾ, ಎಸ್ ಆರ್ ಕಿರಿಶ್ಯಾಳ, ಎಸ್ ಬಿ ಸಿದರೆಡ್ಡಿ,ಎಸ್ ಎಂ ಬಿರಾದಾರ, ವಿ ಎಚ್ ವಾಲಿಕಾರ, ಎಸ್ ವೈ ಭೋವಿ,ಎನ್ ಎಚ್ ಧನ್ನೂರ,ಶ್ರೀದೇವಿ ಬಾಗೇವಾಡಿ, ಸಾವಿತ್ರಿ ವಗ್ಗರ ವೃತ್ತಿಪರ ನಿರ್ದೇಶಕರಾದ ಯು.ವಿ ನಾಗಠಾಣ, ಎಸ್ ಬಿ ಕಟ್ಟಿಮನಿ ಸೇರಿದಂತೆ ಸಂಘದ ಸದಸ್ಯರು ಸಿಬ್ಬಂದಿಗಳು ಭಾಗವಹಿಸಿದ್ದರು .ನಾಗರಬೆಟ್ಟ ಶಾಖೆ ವ್ಯವಸ್ಥಾಪಕ ಆರ್ ಎಸ್ ರಾಮೋಡಗಿ ನಿರೂಪಿಸಿದರು.

# ಗುಂಡ್ಲುಪೇಟೆಯಲ್ಲಿ ನವರಾತ್ರಿ ಸಡಗರ :ದಸರಾ ಗೊಂಬೆಗಳ ಪ್ರದರ್ಶನ



ಗುಂಡ್ಲುಪೇಟೆ: ಎಲ್ಲೆಲ್ಲೂ ದಸರಾ ಹಬ್ಬದ ಸಂಭ್ರಮ ಮನೆ ಮಾಡಿದೆ, ನವರಾತ್ರಿ ಹಬ್ಬದ ಪ್ರಯುಕ್ತ ಮನೆಗಳಲ್ಲಿ ದಸರಾ ಗೊಂಬೆಗಳ ಪ್ರದರ್ಶನ ಎಲ್ಲರನ್ನ ಆಕರ್ಷಿಸುತ್ತಿದೆ. ನವರಾತ್ರಿ ಗೊಂಬೆಗಳ ಪ್ರದರ್ಶನ ಮಹತ್ವಪಡೆದುಕೊಂಡಿದ್ದು ದೇವಾಲಯಗಳಲ್ಲಿ ಪೂಜಾ ಕೈಂಕರ್ಯ ನಡೆದರೆ ಇತ್ತ ಮನೆಗಳಲ್ಲಿ ಗೊಂಬೆಗಳ ಪ್ರದರ್ಶನ ಮನಸೂರಗೊಳ್ಳುತ್ತಿದೆ, ಗುಂಡ್ಲುಪೇಟೆ ಪಟ್ಟಣದ ಸುಬ್ಬುರಾವ್ ಎಂಬವರ ಮನೆಯಲ್ಲಿ ಗೊಂಬೆಗಳನ್ನ ಸಿಂಗಾರಗೊಳಿಸಿ ಎಲ್ಲರ ಕಣ್ಮನ ಸೆಳೆಯುವಂತೆ ಅಳವಡಿಸಲಾಗಿದೆ.

ಮೈಸೂರು ದಸರಾದಲ್ಲಿನ ಅಂಬಾ-ರಿಯಲ್ಲಿ ಕಾಣಸಿಗುವ ಗೊಂಬೆಗಳು , ಮಹಾಭಾರತ ಕಥಾ ಭಾಗವನ್ನ ಸಾರುವ ಗೊಂಬೆಗಳು, ರಾಮಾಯಣದ ಸ್ಪಷ್ಟ ನಿದರ್ಶನವನ್ನ ಸಾರುವ ಗೊಂಬೆಗಳನ್ನ ಸುಬ್ಬುರಾವ್ ಅವರ ಮನೆಯಲ್ಲಿ ಪ್ರದರ್ಶನಕ್ಕಿಡಲಾಗಿದೆ. ಸುಂದರವಾಗಿ ಜೋಡಿಸಿರುವ ಗೊಂಬೆಗಳಿಗೆ ದೀಪಾಲಂಕಾರ ಮಾಡಲಾಗಿದೆ, ಪ್ರತಿನಿತ್ಯ ಬೆಳೆಗ್ಗೆ ಸಂಜೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಸಂಜೆ ವೇಳೆಯಲ್ಲಿ ಮುತ್ತೈದೆಯರನ್ನ ಪೂಜೆಗೆ ಆಹ್ವಾನಿಸಿ ಮಡಿಲು ತುಂಬುವ ಜೊತೆಗೆ ಪ್ರಸಾದ ವಿನಿಯೋಗ ಇರುತ್ತದೆ. ನವರಾತ್ರಿ ಕೊನೆ ದಿನದವರೆಗೂ ಈ ಆಚರಣೆ ಸಾಂಘವಾಗಿ ನಡೆಯುತ್ತದೆ ಕೊನೆ ದಿವಸಕ್ಕೆ ಎಲ್ಲಾ ಗೊಂಬೆಗಳನ್ನ ತೆಗೆದು ಸುರಕ್ಷಿತವಾಗಿ ಎತ್ತಿಡಲಾಗುತ್ತದೆ.

ನನಗೀಗ 84 ವರ್ಷ ವಯಸ್ಸಾಗಿದೆ ಆದ್ರೆ ದಸರಾ ಹಾಗೂ ನವರಾತ್ರಿ ಹಬ್ಬದ ಸಂಧರ್ಭದಲ್ಲಿ ಈ ಗೊಂಬೆಗಳ ಪ್ರದರ್ಶನ ಮತ್ತು ಪೂಜಾ ಕೈಂಕರ್ಯ ಕಾರ್ಯವನ್ನ ನೆರವೇರಿಸಿಕೊಂಡು ಬರ್ತಿದ್ದೇವೆ, ಗೊಂಬೆಗಳನ್ನ ಅಲಂಕಾರಗೊಳಿಸಿ ವಿನೂತನವಾಗಿ ಪ್ರದರ್ಶನಕ್ಕಿಟ್ಟು ಆಚರಣೆ ಮಾಡ್ತೀವಿ ಅಂತ ಸುಬ್ಬುರಾವ್ ಅವರ ತಾಯಿ ವಿಜಯಲಕ್ಷ್ಮಿ ನವರಾತ್ರಿಯ ವಿಶೇಷತೆ ಕುರಿತು ತಿಳಿಸಿದ್ದಾರೆ. ನವರಾತ್ರಿ ಅಮಾವಾಸ್ಯೆ ದಿನದಂದು ಹಚ್ಚಿದ ನಂದಾದೀಪವನ್ನ ವಿಜಯ ದಶಮಿ ಮುಗಿಯುವತನಕ ಕೆಡದಂತೆ ನೋಡಿಕೊಳ್ತೇವೆ ಅಂತ ವಿಜಯಲಕ್ಷ್ಮಿ ಅನುಭವ ಹಂಚಿಕೊಂಡಿದ್ದಾರೆ.

# ಕರಡಿ ವನ್ಯದಾಮದಲ್ಲಿವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ಮಧುಗಿರಿ: ಕಾಡಿನಲ್ಲಿ ಹಲವಾರು ರೀತಿಯ ವನ್ಯ ಮೃಗಗಳು ವಾಸವಿದ್ದು ಮೂಲಭೂತ ಸೌಕರ್ಯಗಳನ್ನು ಈಗ ಕಲ್ಪಿಸಲಾಗಿದ್ದು ಮತ್ತಷ್ಟೂ ಅಭಿವೃದ್ಧಿ ಕಾಮಗಾರಿಗಳನ್ನು ಮುಂದೆ ಅನುಷ್ಠಾನ ಗೊಳಿಸಿ ಹೆಚ್ಚಿನ ಅಭಿವೃದ್ಧಿ ಮಾಡಲಾಗುವುದು ಶಾಸಕ ಕೆ.ಎನ್.ರಾಜಣ್ಣ. ತಾಲೂಕಿನ ತಿಮ್ಮಲಾಪುರ ಕರಡಿ ವನ್ಯಧಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಉದ್ಘಾಟಿಸಿ, ಚಾಲನೆ ನೀಡಿ ಮಾತನಾಡಿದ ಅವರು ಈ ತಿಮ್ಮಲಾಪುರ ವನ್ಯಧಾಮ ಹಿಂದೆ ಇಷ್ಟು ಅಭಿವೃದ್ಧಿ ಕಂಡಿರಲಿಲ್ಲ.

ನನ್ನ ಕಳೆದ ಅವಧಿಯಲ್ಲಿ ಈ ಬಗ್ಗೆ ಕಾರ್ಯಕ್ರಮ ಆಯೋಜಿಸಲಾಗಿ-ತ್ತು. ಇದರಂತೆ ಈಗ ಪ್ರವಾಸಿ ತಾಣವಾಗಿ ಮಾರ್ಪಟ್ಟಿದ್ದು ತಾಲೂಕಿಗೆ ಹೆಮ್ಮೆಯ ಸಂಗತಿಯಾಗಿದೆ. ಈ ಅರಣ್ಯವು ನನಗೆ ಹಳೆಯ ನೆನಪನ್ನು ತರುತ್ತದೆ. ನಾನು ಹಿಂದೆ ಈ ಕಾಡಿನಲ್ಲೇ ಹಲವಾರು ದಿನಗಳನ್ನು ಕಳೆದಿದ್ದೇನೆ. ಈ ಕಾಡಿನಲ್ಲಿ ಹಲವಾರು ರೀತಿಯ ವನ್ಯ ಮೃಗಗಳು ವಾಸವಿದ್ದು ಮೂಲಭೂತ ಸೌಕರ್ಯಗಳನ್ನು ಈಗ ಕಲ್ಪಿಸಲಾಗಿದೆ. ಮತ್ತಷ್ಟೂ ಅಭಿವೃದ್ಧಿ ಕಾಮಗಾರಿಗಳನ್ನು ಮುಂದೆ ಅನುಷ್ಠಾನ ಗೊಳಿಸಲಿದ್ದು ಹೆಚ್ಚಿನ ಅಭಿವೃದ್ಧಿ ಮಾಡಲಾಗುವುದು. ವಿಶ್ವದಲ್ಲಿ ಆಕ್ಸಿಜನ್ ಉತ್ಪಾದನೆ ಇನ್ನು ಸಾಧ್ಯವಾಗಿಲ್ಲ, ಕೈಗಾ-



ರಿಕೆಗಳ ಹಾಗೂ ಆಧುನಿಕತೆಯಲ್ಲಿ ಮನುಕುಲದ ಉಳಿವಿಗಾಗಿ ಅರಣ್ಯ ಅಭಿವೃದ್ಧಿಯಾಗಲೇಬೇಕೆಂದು ತಿಳಿಸಿದರು.

ಸುತ್ತಲಿನ ಗ್ರಾಮದಲ್ಲಿ ಹಿಂದೆ ಗುಡಿಸಲುಗಳಿದ್ದು ಈಗ ಮನೆಗಳು ನಿರ್ಮಾಣಗೊಂಡಿವೆ. ಮತ್ತಷ್ಟೂ ಮನೆಗಳ ಅವಶ್ಯಕತೆಯಿದ್ದರೆ ಕೊಡಿಸುತ್ತೇನೆ. ಇದೇ ವೇಳೆ 2 ಸೋಲಾರ್ ಬೋರ್ವೆಲ್, ವೀಕ್ಷಣಾಗೋಪುರ, ಹಾಗೂ ವನ್ಯಜೀವಿಗಳಿಗೆ ಕುಡಿಯುವ ನೀರಿನ ಮೂಲಗಳ ಕಾಮಗಾ-ರಿಯನ್ನು ಲೋಕಾರ್ಪಣೆಗೊಳಿಸಿದರು. ಈ ಸಂದರ್ಭದಲ್ಲಿ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಬಸವರಾಜು, ಜಿಲ್ಲಾ ಅರಣ್ಯಾಧಿಕಾರಿ ಶಶಿಧರ್, ತಾಲೂಕು ಅರಣ್ಯಾಧಿಕಾರಿ ಮಲ್ಲಿಕಾರ್ಜುನ್, ವಲಯ ಅರಣ್ಯಾಧಿಕಾರಿ ಸುರೇಶ್, ಉಪ ವಲಯ ಅರಣ್ಯಾಧಿಕಾರಿ ಮುತ್ತುರಾಜ್, ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಮುಖಂಡರು ಹಾಗೂ ಮತ್ತಿತರರಿದ್ದರು.

# ರಾಜ್ಯ ಸರ್ಕಾರದಿಂದ ಗುಂಡಿಭಾಗ್ಯ :ಗುಂಡ್ಲುಪೇಟೆಯಲ್ಲಿ ರಸ್ತೆ ಗುಂಡಿ ಮುಚ್ಚಿ ಬಿಜೆಪಿ ಪ್ರತಿಭಟನೆ

ಗುಂಡ್ಲುಪೇಟೆ: ರಾಜ್ಯ ಸರ್ಕಾರವು ರಸ್ತೆಯ ಗುಂಡಿಗಳನ್ನ ಮುಚ್ಚಲು ಸಹ ಸಂಪೂರ್ಣವಾಗಿ ನಿರ್ಲಕ್ಷ್ಯತನ ತೋರುತ್ತಿದೆ ಎಂದು ಆರೋಪಿಸಿ ಗುಂಡ್ಲುಪೇಟೆಯಲ್ಲಿ ಮಾಜಿ ಶಾಸಕ ಹಾಗೂ ಚಾಮರಾಜನಗರ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ರಸ್ತೆಯ ಗುಂಡಿ ಮುಚ್ಚುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ರಾಜ್ಯ ಸರ್ಕಾರದ ವೈಫಲ್ಯ ಹಾಗೂ ರಸ್ತೆಯ ಗುಂಡಿಗಳನ್ನ ಮುಚ್ಚಲು ಮುಂದಾಗದೆ ನಿರ್ಲಕ್ಷ್ಯ ತೋರಿರುವುದನ್ನ ಖಂಡಿಸಿ ಗುಂಡ್ಲುಪೇಟೆ ಬಿಜೆಪಿ ಮಂಡಲ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು. ಪಟ್ಟಣದ ಕೋಡಹಳ್ಳಿ ವೃತ್ತದ ಬಳಿ ಜಮಾಯಿಸಿದ ಬಿಜೆಪಿ ಮುಖಂಡರು ಸರ್ಕಾರ ಹಾಗೂ ಸಚಿವ ಶಾಸಕರ ವಿರುದ್ಧ ದಿಕ್ಕಾರದ ಘೋಷಣೆಗಳನ್ನ ಕೂಗಿದರು. ಗುಂಡ್ಲುಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿನ ಗುಂಡಿಗಳಲ್ಲಿ ರಸ್ತೆಗಳನ್ನ ಹುಡುಕಾಡುವ ದುಸ್ಥಿತಿ ಎದುರಾಗಿದೆ.



ಕೇವಲ ಗುಂಡ್ಲುಪೇಟೆ ಕ್ಷೇತ್ರದಲ್ಲಿ ಮಾತ್ರವೇ ಗುಂಡಿಮಯವಾಗಿದೆ ಎಂದು ಭಾವಿಸಿದ್ದೆವು ಆದರೆ ರಾಜಧಾನಿ ಬೆಂಗಳೂರು ಗುಂಡಗಳಿಂದ ತುಂಬಿಹೋಗಿದೆ, ರಾಜ್ಯಾದ್ಯಂತ ಅದ್ವಾನಗೊಂಡಿರುವ ರಸ್ತೆಗಳ ವಸ್ತುಸ್ಥಿತಿಯನ್ನ ಸರ್ಕಾರಕ್ಕೆ ಹಾಗೂ ಶಾಸಕರಿಗೆ ಮನದಟ್ಟು ಮಾಡುವ ಕೆಲಸಕ್ಕೆ ಬಿಜೆಪಿ ಮುಂದಾಗಲಿದೆ ಎಂದು ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಹೇಳಿದರು. ರಾಜ್ಯ ಸರ್ಕಾರ ಮೊದಲು ಗುಂಡಿ ಮುಚ್ಚುವ ಕೆಲಸ ಮಾಡಲಿ ಎಂದು ಬಿಜೆಪಿ ಒತ್ತಾಯಿಸುತ್ತಿದೆ , ನಮ್ಮ ಜಿಲ್ಲೆಯಲ್ಲಿಯೇ ಗುಂಡಿ ಮುಚ್ಚುವ ಕೆಲಸಕ್ಕೆ ಮುಂದಾಗುವಂತೆ ಎಚ್ಚರಿಕೆ ನೀಡುತ್ತಾ ಇಂದು ಸಾಂಕೇತಿಕವಾಗಿ ನಾವೇ ಗುಂಡಿಯನ್ನ ಮುಚ್ಚಿ ಎಚ್ಚ-ರಿಸಿದ್ದೇವೆ ಎಂದರು.

ಚುನಾಯಿತ ಶಾಸಕರು ಮಾತಿನಲ್ಲೇ ಅಭಿವೃದ್ಧಿ ಕೆಲಸವನ್ನ ತೋರಿಸುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ, ನಿಮಗೆ ಹೊಸ ರಸ್ತೆ ಮಾಡಿಸಲಾಗದಿದ್ದಲ್ಲಿ ಗುಂಡಿಗಳನ್ನಾದರು ಮುಚ್ಚುವ ಕೆಲಸ ಮಾಡಿ ಜನರಿಗೆ ಸಹಾಯ ಮಾಡಿ ಎಂದು ಸಲಹೆ ನೀಡಿದರು.
ಮೂಲಸೌಕರ್ಯ ಕುರಿತು ಪ್ರಶ್ನಿಸಿದರೆ ಅನುದಾನವಿಲ್ಲ ಎಲ್ಲಾ ಹಣವನ್ನ ಗ್ಯಾರಂಟಿಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ ಎಂದು ಸಬೂಬು ಹೇಳುವ ಪ್ರವೃತ್ತಿಯನ್ನ ಬಿಡಿ, ತಮ್ಮ ಸ್ವಗ್ರಾಮಕ್ಕೆ ಹೊಸ ರಸ್ತೆಯನ್ನ ಮಾಡಿಸಿಕೊಂಡಿದ್ದಾರೆ, ಪ್ರತಿವರ್ಷವೂ ಹಾಲಹಳ್ಳಿ ಗ್ರಾಮಕ್ಕೆ ಡಾಂಬರು ಹಾಕಲು ವ್ಯಯ ಮಾಡುತ್ತಾರೆ ಆದರೆ ಬೇರೆ ಗ್ರಾಮಾಂತರ ಪ್ರದೇಶಗಳಿಗೆ ರಸ್ತೆ ವ್ಯವಸ್ತೆ ಕಲ್ಪಿಸಲು ಆಸಕ್ತಿವಹಿಸುತ್ತಿಲ್ಲ ಎಂದು ಕಿಡಿಕಾರಿದರು.

ತಮ್ಮ ಸ್ವಂತ ಕ್ರಷರ್ ಗೆ ದಲಿತ ಜನಾಂಗದವರ ಜಮೀನಿನ ನಡುವೆ ರಸ್ತೆ ಮಾಡಿಸುವ ಮೂಲಕ ಬಡವರ ಕಣ್ಣೀರಿಗೆ ಕಾರಣರಾಗಿದ್ದರು, ಅಂದು ದಲಿತರ ಪರ ನಿಂತ ಬಿಜೆಪಿ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು ಅಹವಾಲು ಸ್ವೀಕರಿಸಿ ರಸ್ತೆ ನಿರ್ಮಾಣ ಕಾಮಗಾರಿಯನ್ನ ತಡೆದಿದ್ದರು , ಆದರೆ ಪ್ರಸ್ತುತವಾಗಿ ತಮ್ಮ ರಾಜ-ಕೀಯ ಶಕ್ತಿಯನ್ನ ಬಳಸಿಕೊಂಡು ಕೋಟ್ಯಾಂತರ ರೂ ಅನುದಾನದ ಮೂಲಕ ಅಲ್ಲಿಯೇ ಡಾಂಬರು ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದಾರೆ ಎಂದು ಆರೋಪಿಸಿದರು. ಗಣೇಶ್ ಪ್ರಸಾದ್ ಅವರು ಅಧಿಕಾರಕ್ಕೆ ಬಂದಿರುವುದು ಸ್ವ ಅಭಿವೃದ್ಧಿಗಾಗಿ ಮಾತ್ರವೇ ಹೊರತು ಜನರ ಹಿತಕ್ಕಾಗಿ ಅಲ್ಲ ಎಂದು ವ್ಯಾಖ್ಯಾನಿಸಿದರು. ಸರ್ಕಾರ ಹೊಸ ರಸ್ತೆಗಳನ್ನ ಮಾಡಲು ಅಶಕ್ತವಾಗಿದೆ ಆದುದ-ರಿಂದ ಗುಂಡಿಗಳನ್ನಾದರು ಮುಚ್ಚುವ ಕೆಲಸಕ್ಕೆ ಮುಂದಾಗಬೇಕು ಎಂದು ಆಗ್ರಹಿಸಿದರು.
ಈ ಸಂಧರ್ಭದಲ್ಲಿ ಬಿಜೆಪಿ ಮಂಡಲ ಅದ್ಯಕ್ಷ ಮಹದೇವಪ್ರಸಾದ್, ನಾಗೇಶ್, ನಾಗೇಂದ್ರ ಮಾಡ್ರಹಳ್ಳಿ, ಮಂಚಹಳ್ಳಿ ಬಾಬು, ಮಂಜು ಕಗ್ಗಳದ ಹುಂಡಿ, ಎಲ್ ಸುರೇಶ್, ಗೀತಾ ಶಿವಪುರ, ಮಂಗಳಮ್ಮ, ಮಹೇಂದ್ರ ಗರಗನಹಳ್ಳಿ, ಮಹೇಶ್ ಮಳವಳ್ಳಿ , ಹಳ್ಳದಮಾದಹಳ್ಳಿ ಮಹೇಂದ್ರ, ಬಸವಣ್ಣ, ಸದಾ ಕೆಲಸೂರು, ಸೇರಿದಂತೆ ಹಲವರು ಭಾಗಿಯಾಗಿದ್ದರು.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.